

ಪ್ರಾಕೃತಿಕವಾಗಿ ಬದುಕುವುದರಿಂದ ರೋಗಗಳನ್ನು ದೂರೀಕರಿಸಬಹುದು ಎಂಬ ನಿರ್ಣಯಕ್ಕೆ ಬರುತ್ತಿದ್ದಾರೆ.

ಜಪಾನಿನ ಒಸಾಕಾ ಪಟ್ಟಣದಲ್ಲಿ 'ರಿಸರ್ಚ್ ಸೊಸೈಟಿ ಫಾರ್ ಆಯುರ್ವೇದ ಇನ್ ಜಪಾನ್' ಎಂಬ ಸಂಸ್ಥೆ ಆಸಕ್ತಿಯಿಂದ ಆಯುರ್ವೇದ ಅಧ್ಯಯನ ನಡೆಸುತ್ತಿದೆ. ಜರ್ಮನಿಯಲ್ಲಿ ಆಯುರ್ವೇದ ಗ್ರಂಥಗಳ ಭಾಷಾಂತರ, ಸಂಶೋಧನೆ ಕಾರ್ಯಗಳು ಪ್ರಗತಿಯಲ್ಲಿವೆ. ದಕ್ಷಿಣ ಅಮೆರಿಕಾ ಹಾಗೂ ರಷ್ಯಾದಲ್ಲಿ ಗಿಡಮೂಲಿಕೆಗಳನ್ನು ವಿಶ್ಲೇಷಿಸಿ ಅಧ್ಯಯನ ನಡೆಸುವ ಕಾರ್ಯ ನಡೆದಿದೆ. ವಿಶ್ವ ಆರೋಗ್ಯ ಸಂಸ್ಥೆ ಆಯುರ್ವೇದಕ್ಕೆ ಅಂತರರಾಷ್ಟ್ರೀಯ ಮನ್ನಣೆ ನೀಡಿರುವುದೂ ಮಹತ್ವದ ಸಂಗತಿ.

ಮುಂಬಯಿಯ ಜಸ್ಲೋಕ್ ಆಸ್ಪತ್ರೆಯಲ್ಲಿ ಎಚ್‌ಐವಿ ಸೋಂಕಿತ ರೋಗಿಗಳಿಗೆ ರೋಗ ನಿರೋಧಕ ಶಕ್ತಿ ಹೆಚ್ಚಿಸುವುದಕ್ಕಾಗಿ ಆಯುರ್ವೇದ ಔಷಧಿಗಳನ್ನು ನೀಡುತ್ತಿದ್ದು, ರೋಗಿಗಳು ಬೇರೆ ಅವಕಾಶವಾದಿ ಸೋಂಕುಗಳಿಗೆ ಈಡಾಗುವುದನ್ನು ಅದು ತಪ್ಪಿಸುತ್ತಿದೆ ಎಂದು ತಿಳಿದು ಬಂದಿದೆ. ದೇಶದೆಲ್ಲೆಡೆ ಈ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಿವೆ.

ಆದರೆ ಈ ಜಾಗತಿಕ ಮನ್ನಣೆಯಿಂದಾಗಿ ಬಹುರಾಷ್ಟ್ರೀಯ ಉದ್ಯಮದ ಸ್ವರೂಪ ಪಡೆದುಕೊಂಡು, ಆಯುರ್ವೇದ ಔಷಧಿಗಳು ಇಂದು ದುಬಾರಿಯಾಗಿರುವುದೂ ನಿಜ. ಪಂಚಕರ್ಮ ಎಂದರೆ ಕೇವಲ ಮಸಾಜ್ ಎಂದೇ ಚಿತ್ರಿತವಾಗುತ್ತಿದೆ. ಇದು ಪ್ರವಾಸೋದ್ಯಮದ ಭಾಗವಾಗಿಯೂ ಬೆಳೆಯುತ್ತಿದೆ. ಕೇರಳದ ಹಲವೆಡೆ, ನಮ್ಮದೇ ರಾಜ್ಯದ ಚಿಕ್ಕಮಗಳೂರು, ಕರಾವಳಿ ಪ್ರದೇಶಗಳಲ್ಲಿ ರೆಸಾರ್ಟ್‌ಗಳಲ್ಲಿ ಕೆಲವು ದಿನ ಉಳಿದು 'ಒತ್ತಡ' ಕಡಿಮೆ ಮಾಡುವ ಆಯುರ್ವೇದ ಚಿಕಿತ್ಸೆಯನ್ನು ಪಡೆದು ದುಬಾರಿ ಹಣ ತೆತ್ತು ಬರುವವರ ಸಂಖ್ಯೆ ಹೆಚ್ಚಾಗಿದೆ. ವಿದೇಶೀಯರು ಭಾರತಕ್ಕೆ ಬರುವಾಗ ಅವರ ಕಾರ್ಯಕ್ರಮದ ಪಟ್ಟಿಯಲ್ಲಿ ಆಯುರ್ವೇದ ಚಿಕಿತ್ಸೆಯನ್ನು ಸೇರಿಸುವುದೂ ನಡೆದಿದೆ.

ಹೊಸ ಆಯುರ್ವೇದ ಕಂಪೆನಿಗಳ ಬಹುರಾಷ್ಟ್ರೀಯ ಸ್ವರೂಪದ ಅಬ್ಬರದಿಂದ ನಿಜಕ್ಕೂ ಸಾಂಪ್ರದಾಯಿಕವಾಗಿ, ಪ್ರಚಾರದ ಹಪಾಹಪಿ ಇಲ್ಲದೆ ಕಾರ್ಯ ನಿರ್ವಹಿಸುತ್ತಿದ್ದ ಬಹಳಷ್ಟು ಆಯುರ್ವೇದ ಸಂಸ್ಥೆಗಳಿಗೆ ನಷ್ಟ ಉಂಟಾಗಿದೆ. ಈಗ ಆ ಸಂಸ್ಥೆಗಳೂ ಪ್ರಚಾರಕ್ಕೆ ಹೆಚ್ಚು ಹಣ ಸುರಿದು ತಮ್ಮ ಔಷಧಿಗಳ ಬೆಲೆ ಹೆಚ್ಚಿಸುವುದು ಅನಿವಾರ್ಯವಾಗಿದೆ. ಈ ಮಧ್ಯೆ ಆಯುರ್ವೇದದಿಂದ ಎಲ್ಲ ರೋಗಗಳೂ ಗುಣವಾಗುತ್ತವೆ ಎಂದು ಡಾಣಾಡಂಗುರ ಹೊಡೆಯುವವರ ಸಂಖ್ಯೆ ಬೆಳೆಯುತ್ತಿದ್ದು, ಅವೈಜ್ಞಾನಿಕ ಸ್ವರೂಪದ ಜಾಹೀರಾತುಗಳೂ ಬರತೊಡಗಿವೆ. ಜಾಗತೀಕರಣದ ದುಷ್ಪಗುಣಗಳು ಆಯುರ್ವೇದವನ್ನೂ ಆವರಿಸಿರುವ ಈ ದುಸ್ಥಿತಿಯ ಬಗ್ಗೆ ಪ್ರಜ್ಞಾವಂತರು ಚಿಂತಿಸಿ ಮುಂದಡಿ ಇಡಬೇಕಾದ ಅಗತ್ಯವಿದೆ.

## ಆಯುಷ್ ಇಲಾಖೆ ಮತ್ತು ಶಿಕ್ಷಣ

ಆಯುರ್ವೇದ, ಯುನಾನಿ, ಹೋಮಿಯೋಪತಿ ಮತ್ತು ಪ್ರಕೃತಿ ಚಿಕಿತ್ಸೆ ಇವುಗಳಲ್ಲಿ ತರಬೇತಿ, ಸುಧಾರಣೆ ಮತ್ತು ಸಮಗ್ರ ಅಭಿವೃದ್ಧಿಗೆ ಮಾರ್ಗಸೂತ್ರಗಳನ್ನು ರಚಿಸಲು 1972ರಲ್ಲಿ ಕರ್ನಾಟಕ ಸರ್ಕಾರ ಡಾ.ಜಿ.ಎಸ್. ಮೇಲುಕೋಟೆಯವರ ಅಧ್ಯಕ್ಷತೆಯಲ್ಲಿ ಪ್ರತ್ಯೇಕ ಇಲಾಖೆ ರಚಿಸಿತು. ಅದು ಆಯುರ್ವೇದ, ಯುನಾನಿ, ಸಿದ್ಧ, ಪ್ರಕೃತಿ ಚಿಕಿತ್ಸೆ, ಯೋಗ, ಹೋಮಿಯೋಪತಿ ಈ ಪದ್ಧತಿಗಳನ್ನು ನೋಡಿಕೊಳ್ಳಬೇಕೆಂದೂ, ಹೊಸ ಇಲಾಖೆಗಳನ್ನು 'ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆ' ಎಂದು ಕರೆಯಬೇಕೆಂದೂ ಶಿಫಾರಸ್ಸು ಮಾಡಿತು. ಈಗ ಅದನ್ನು 'ಆಯುಷ್ ಇಲಾಖೆ' ಎಂದು ಕರೆಯಲಾಗುತ್ತಿದೆ.

ಬಿಎಸ್‌ಎಎಂ ಎಂದು ಕರೆಯಲಾಗುತ್ತಿದ್ದ ಐದೂವರೆ ವರ್ಷದ (5 ವರ್ಷ ಅಧ್ಯಯನ ಮತ್ತು ಆರು ತಿಂಗಳು ಹೌಸ್ ಸರ್ಜನ್‌ಸಿ) ಆಯುರ್ವೇದ ಪದವಿ, ನಂತರದಲ್ಲಿ ದೇಶದಾದ್ಯಂತ ಏಕರೂಪ ಪಠ್ಯಕ್ರಮದೊಂದಿಗೆ ಆರಂಭವಾಗಿದ್ದು ಬಿ.ಎ.ಎಂ.ಎಸ್. ಎಂಬ ಹೆಸರು ಬಂತು.

ಆಯುರ್ವೇದ ವೈದ್ಯ ಪದ್ಧತಿ ಕೂಡ ಇತರ ವೈದ್ಯಪದ್ಧತಿಯಂತೆ ವೈದ್ಯಕೀಯ ಕ್ಷೇತ್ರದಲ್ಲಿ ಮಾನ್ಯತೆ ಪಡೆದಿದೆ. ಭಾರತದಲ್ಲಿ ಆಯುರ್ವೇದ ವೈದ್ಯ ಪದವಿ ಪಡೆಯಲು ಇಚ್ಛಿಸುವವರು ಐದೂವರೆ ವರ್ಷದ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು. ಪಿಯುಸಿ ಇಲ್ಲವೇ 10+2 ವಿಜ್ಞಾನ ವಿಷಯವನ್ನು ಕಲಿತವರು ಈ ಕೋರ್ಸ್ ಮಾಡಬಹುದು. ಇದಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಬೇಕಾಗುತ್ತದೆ. ನಂತರ ಸ್ನಾತಕೋತ್ತರ ಕೋರ್ಸ್‌ಗಳು ಇವೆ.

## ಉಲ್ಲೇಖ

**ಸುಶ್ರುತ ಸಂಹಿತೆ, ಚರಕ ಸಂಹಿತೆ, ಅಷ್ಟಾಂಗ ಸಂಗ್ರಹ**
**ಸಾರಂಗಧರ ಸಂಹಿತೆ, ಲೋಕಾಯತ**
**ಆಯುರ್ವೇದ ಇತಿಹಾಸ– ಡಾ.ಕೆ.ಆರ್. ಶ್ರೀಕಂಠಮೂರ್ತಿ**

**(ಲೇಖಕಿ ಬೆಂಗಳೂರಿನಲ್ಲಿ ಖ್ಯಾತ ಆಯುರ್ವೇದ ತಜ್ಞೆ.**
**ಸಂಪರ್ಕ: 9986850477)**